ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ: 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆನಂದ್ ಗೋನಾಲ್ | ಚಾಸಾಃ 32 |
| ತಂದೆಯ ಹೆಸರು | : | ಹನುಮಂತ ಗೌಡ | ಫ್ರಾಸಾಃ 12 |
| ಪ್ರಾಯ | : | 30 ವರ್ಷ | ದಿನಾಂಕಃ 11.12.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪಿ.ಸಿ 3078 ಕಾವೂರು ಪೊಲೀಸ್ ಠಾಣೆ | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು ಏಪ್ರಿಲ್ 2018 ರಿಂದ ಜೂನ್ 2021 ವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ಸಲ್ಲಿಸಿರುತ್ತೇನೆ.

2. ದಿ. 11.06.2021 ರಂದು ಚಾಸಾ-38 ರವರು ಆದೇಶದಂತೆ ಠಾಣೆಯಲ್ಲಿ ಇದ್ದ ನ್ಯಾಯಾಲಯದ ವಿ.ಸಿ ಯಲ್ಲಿ ಕಾಣಿಸುವ ಆರೋಪಿಯ ಮತ್ತು ಆತನ ಮೋಟಾರ್ ಸೈಕಲ್ ನಂಬರ್ KL-18/F-3859 ರ ಬಾವಾಚಿತ್ರವನ್ನು ನನ್ನ ರೆಡ್ಮಿ ನೋಟ್ 8 ಪ್ರೋ ಮೊಬೈಲ್ ನಲ್ಲಿ ತೆಗೆದಿರುತ್ತೇನೆ.

3. ನಂತರ ನನ್ನ ಮೊಬೈಲ್ ನಿಂದ ಠಾಣೆಯಲ್ಲಿದ್ದ ಗಣಕಯಂತ್ರಕ್ಕೆ ಡೌನ್ಲೋಡ್ ಮಾಡಿ ಯಥಾವತ್ತಾಗಿ ಯಾವುದೇ ಬದಲಾವಣೆ ಮಾಡದೆ ಅವುಗಳ ಪ್ರಿಂಟ್ ನ್ನು ತೆಗೆದು ಸಿ.ಡಿ ಗೆ ವರ್ಗಾಯಿಸಿ ಪೊಟೋಗಳನ್ನು ಮತ್ತು ಸಿ.ಡಿ ಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸದರಿ ಮೋಟಾರ್ ಸೈಕಲ್ ನ ಫೊಟೋಗಳನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-20 ಎಂದೂ ಗುರುತಿಸಲಾಗಿರುತ್ತದೆ. ಸಿ.ಡಿ ಯನ್ನು ನೋಡುತ್ತಿದ್ದು

ಅದನ್ನು ನಿಪಿ–20(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–31 ಎಂದೂ ಸಾಕ್ಷಿ ಸಹಿಯನ್ನು ನಿಪಿ–31(ಎ) ಎಂದು ಗುರುತಿಸಲಾಯಿತು.

4. ದಿ. 02.07.2021 ರಂದು ಚಾಸಾ–38 ರವರ ಜೊತೆಗೆ ಮಂಗಳೂರಿನ 6 ನೇ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ inventory ಸಲುವಾಗಿ ಬೇಕಾಗಿರುವ ಸಲಕರಣೆಯೊಂದಿಗೆ ಹೋಗಿ ಈ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಮಾದಕವಸ್ತುಗಳ ಎರಡು ಪ್ಯಾಕೆಟ್‌ಗಳನ್ನು ಚಾಸಾ–38 ರವರು ನ್ಯಾಯಾಧೀಶರ ಮುಂದೆ A1 ಮತ್ತು A4 ಎಂದು ಗುರುತಿಸಿದ ಮಾದಕವಸ್ತು ಪ್ಯಾಕೆಟ್‌ಗಳನ್ನು inventory ಸಲುವಾಗಿ ಹಾಜರುಪಡಿಸಿರುತ್ತಾರೆ.

5. ನ್ಯಾಯಾಧೀಶರ ಮುಂದೆ ಬಟ್ಟೆಯ ಪ್ಯಾಕೆಟ್ ನಲ್ಲಿ ಇದ್ದ ಸದರಿ A1 ನ್ನು ತೆಗೆದು ನೋಡಿದಾಗ ಅದರಲ್ಲಿ ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು ಅವುಗಳನ್ನು ತೂಕ ಮಾಡಿದಾಗ 15.05 ಗ್ರಾಂ ಆಗಿತ್ತು ಹಾಗೆಯೇ ಬಟ್ಟೆಯ ಪ್ಯಾಕೆಟ್ ನಲ್ಲಿ ಇದ್ದ ಸದರಿ A4 ನ್ನು ತೆಗೆದು ನೋಡಿದಾಗ ಅದರಲ್ಲಿ ಗಾಂಜಾ ಇದ್ದು ಅದನ್ನು ಬಟ್ಟೆ ಸಮೇತ ತೂಕ ಮಾಡಿದಾಗ 48 ಗ್ರಾಂ ಇತ್ತು ಮತ್ತು ಬಟ್ಟೆ ಹೊರತಾಗಿ ತೂಕ ಮಾಡಿದಾಗ 26 ಗ್ರಾಂ ಇತ್ತು. ನಂತರ ಸದರಿ ಎಲ್.ಎಸ್.ಡಿ ಸ್ಟಾಂಪ್ ಗಳನ್ನು ಬಟ್ಟೆಯಲ್ಲಿ ಹಾಕಿ ಹೊಲೆದು ಅದಕ್ಕೆ ಅರಗು ಸೀಲ್ ನ್ನು ಹಾಕಿದ್ದು ಅದಕ್ಕೆ ನ್ಯಾಯಾಧೀಶರು B ಎಂದು ಗುರುತು ಸಂಖ್ಯೆಯನ್ನು ನೀಡಿರುತ್ತಾರೆ. ನಂತರ ಸದರಿ ಗಾಂಜಾವನ್ನು ಬಟ್ಟೆಯಲ್ಲಿ ಹಾಕಿ ಹೊಲೆದು ಅದಕ್ಕೆ ಅರಗು ಸೀಲ್ ನ್ನು ಹಾಕಿದ್ದು ಅದಕ್ಕೆ ನ್ಯಾಯಾಧೀಶರು C ಎಂದು ಗುರುತು ಸಂಖ್ಯೆಯನ್ನು ನೀಡಿರುತ್ತಾರೆ.

6. ಸದರಿ ಪ್ಯಾಕೆಟ್ ಗಳಿಗೆ ನ್ಯಾಯಾಧೀಶರ ಸಹಿ ಮತ್ತು ಸೀಲು ಇರುವ ಚೀಟಿಯನ್ನು ಅಂಟಿಸಲಾಗಿರುತ್ತದೆ ಮತ್ತು ಅವುಗಳ ಮೇಲೆ B ಮತ್ತು C ಎಂದು ಗುರುತು ಸಂಖ್ಯೆಗಳನ್ನು ನೀಡಿರುತ್ತಾರೆ. ನಂತರ ಸದರಿ ಪ್ಯಾಕೆಟ್ ಗಳನ್ನು ನ್ಯಾಯಾಧೀಶರು ತನಿಖಾಧಿಕಾರಿ ಚಾಸಾ–38 ರವರಿಗೆ FSL ಗೆ ಕಳುಹಿಸುವ ಸಲುವಾಗಿ ಹಸ್ತಾಂತರಿಸಿರುತ್ತಾರೆ.

7. ಆ ಸಮಯದಲ್ಲಿ ಚಾಸಾ–38 ರವರ ಆದೇಶದಂತೆ ನನ್ನ ಸದರಿ ಮೊಬೈಲ್ ನಲ್ಲಿ 12 ಫೋಟೋಗಳನ್ನು ತೆಗೆದಿರುತ್ತೇನೆ. ನಂತರ ನನ್ನ ಸದರಿ ಮೊಬೈಲ್ ನಿಂದ ಠಾಣೆಯಲ್ಲಿದ್ದ ಗಣಕಯಂತ್ರಕ್ಕೆ ಡೌನ್ಲೋಡ್ ಮಾಡಿ ಯಥಾವತ್ತಾಗಿ ಯಾವುದೇ ಬದಲಾವಣೆ ಮಾಡದೆ ಅವುಗಳ ಪ್ರಿಂಟ್ ನ್ನು ತೆಗೆದು ಸಿ.ಡಿ ಗೆ ವರ್ಗಾಯಿಸಿ ಫೋಟೋಗಳನ್ನು ಮತ್ತು ಸಿ.ಡಿ ಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ–32 ಎಂದೂ ಗುರುತಿಸಲಾಯಿತು. ಸದರಿ ಸಿ.ಡಿ ಯನ್ನು ನೋಡುತ್ತಿದ್ದು ಅದನ್ನು ನಿಪಿ–32(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–33 ಎಂದೂ ಸಾಕ್ಷಿ ಸಹಿಯನ್ನು ನಿಪಿ–33(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ.ಆರ್.ಎ ವಕೀಲರಿಂದ ಶ್ರೀ ಎಂ.ಬಿ ., ವಕೀಲರ ಪರವಾಗಿಃ**

8. ನಾನು ಆರೋಪಿಯ ಫೋಟೋವನ್ನಾಗಲಿ ಅಥವಾ ಆರೋಪಿಯ ಮೋಟಾರ್ ಸೈಕಲ್ ನ ಫೋಟೋವನ್ನಾಗಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

9. ನಾನು inventory ಸಮಯದಲ್ಲಿ ಹಾಜರಿರಲಿಲ್ಲ ಮತ್ತು ಫೋಟೋಗಳನ್ನು ತೆಗದಿರಲಿಲ್ಲ ಎಂದರೆ ಸರಿಯಲ್ಲ.

Spl. C.11/2022
CW - 32, PW - 12

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓದಿ ಹೇಳಿ ಕೇಳಿ ಸರಿ ಇದೆ.**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.